ಇ) ಮಂಡ್ಯ ಜಿಲ್ಲೆಯಲ್ಲಿ ಯಾವ ಯಾವ ಸ್ಥಳಗಳಲ್ಲಿ ಮರಳನ್ನು ತೆಗೆಯಲು ಪರವಾನಿಗೆ ನೀಡಲಾಗಿದೆ;

ಈ) ಈ ಪರವಾನಿಗೆ ಅನ್ವಯ ಎಷ್ಟು ಪ್ರಮಾಣದ ಲೋಡ್‌ಗಳನ್ನು ತೆಗೆಯಬಹುದು; ಪ್ರತಿ ದಿನ ಬೆಂಗಳೂರಿಗೆ ಮಂಡ್ಯ ಜಿಲ್ಲೆಯಿಂದ ಎಷ್ಟು ಲಾರಿ ಮರಳು ಸಾಗಾಣಿಕೆಯಾಗುತ್ತದೆ;

ಉ) ಅನಧಿಕೃತ ಮರಳು ಸಾಗಾಣಿಕೆ ಬಗೆಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ 1994ರ ನಿಯಮ 21(1) ಮತ್ತು 21(2)ರಂತೆ ಬಹಿರಂಗ ಹರಾಜು ಮೂಲಕ ಪರವಾನಿಗೆಗಳನ್ನು ನೀಡಲಾಗುತ್ತಿದೆ. ಕರಾವಳಿ ಜಿಲ್ಲೆಗಳಲ್ಲಿ (ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ) ತಾತ್ಕಾಲಿಕ ಪರವಾನಿಗೆಗಳ ಮುಖಾಂತರ ನೀಡಲಾಗುತ್ತಿದೆ.

ಆ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮರಳು ನಿಕ್ಷೇಪ ತೆಗೆಯಲು ಅನುಮತಿ ನೀಡಲಾಗಿದೆ.

ಇ) ಮಳವಳ್ಳಿ ತಾಲ್ಲೂಕು ತೊರೆಕಾಡನಹಳ್ಳಿ, ಗಾಣಾಳು ಮತ್ತು ಮರಳಹಳ್ಳಿ ಗ್ರಾಮದ ನದಿ ಪಾತ್ರದಲ್ಲಿ ಮರಳು ಸಾಗಾಣಿಕೆಗಾಗಿ ಮರಳು ಹರಾಜು ಗುತ್ತಿಗೆ ನೀಡಲಾಗಿದೆ.

ಈ) ಇಂತಹ ನಿರ್ಭಂದವಿಲ್ಲ. ಮಂಡ್ಯ ಜಿಲ್ಲೆಯಿಂದ ಬೆಂಗಳೂರಿಗೆ ಪ್ರತಿದಿನ ನೂರಕ್ಕೂ ಹೆಚ್ಚು ಲೋಡು ಮರಳು ಬರುತ್ತಿದೆ.

ಉ) ಪೊಲೀಸ್ ಹಾಗೂ ಕಂದಾಯ ಇಲಾಖೆಗಳ ಸಹಕಾರದೊಂದಿಗೆ ತಪಾಸಣೆ ನಡೆಸಿ ಅನಧಿಕೃತ ಮರಳು ಸಾಗಾಣಿಕೆಯನ್ನು ನಿಯಂತ್ರಿಸುತ್ತಿದೆ.

ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ಸಕ್ಕರೆ ಪ್ರಮಾಣ

3629(4351) ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಸರ್ಕಾರಿ ಮತ್ತು ಸರ್ಕಾರೇತರ ಸಕ್ಕರೆ ಕಾರ್ಖಾನೆಗಳು ಪ್ರತಿ ವರ್ಷ ಉತ್ಪಾದನೆ ಮಾಡುತ್ತಿರುವ ಸಕ್ಕರೆ ಪ್ರಮಾಣವೆಷ್ಟು;

ಆ) ಇವುಗಳು ಈ ವರ್ಷ ಎಷ್ಟು ಟನ್ ಸಕ್ಕರೆ ಬಿಡುಗಡೆ ಮಾಡಿವೆ? ಮತ್ತು ಉಳಿಕೆ ಪ್ರಮಾಣವೆಷ್ಟು ವಿವರವಾಗಿ ತಿಳಿಸುವುದು;

ಇ) ಸಕ್ಕರೆ ಕಾರ್ಖಾನೆಗಳು ರೈತರಿಂದ ಪಡೆದ ಕಬ್ಬಿನ ಹಣದ ಬಿಲ್ಲಿನ ಬಾಬ್ತಿನಲ್ಲಿ ಪಾವತಿಸಿದ ಹಣವೆಷ್ಟು; ಬಾಕಿ ಇರುವ ಹಣ ಎಷ್ಟು; ಮತ್ತು ಟನ್ ಕಬ್ಬಿಗೆ ನಿಗಧಿಪಡಿಸಿದ ಬೆಂಬಲ ಬೆಲೆ ಎಷ್ಟು;

ಈ) ರಾಜ್ಯದಲ್ಲಿರುವ ರೋಗಗ್ರಸ್ಥ ಸಕ್ಕರೆ ಕಾರ್ಖಾನೆಗಳನ್ನು ಪುನಶ್ಚೇತನಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಸಂಪೂರ್ಣ ಮಾಹಿತಿ ನೀಡುವುದು?

ಶ್ರೀ ಎಂ. ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ರಾಜ್ಯದ ಸರ್ಕಾರಿ ಮತ್ತು ಸರ್ಕಾರೇತರ ಸಕ್ಕರೆ ಕಾರ್ಖಾನೆಗಳು ಸೇರಿದಂತೆ ಎಲ್ಲಾ ಸಕ್ಕರೆ ಕಾರ್ಖಾನೆಗಳು ಪ್ರತಿವರ್ಷ ಸುಮಾರು 18 ಲಕ್ಷ ಮೆಟ್ರಿಕ್ ಟನ್ ಸಕ್ಕರೆಯನ್ನು ಉತ್ಪಾದಿಸುತ್ತಿವೆ.

ಆ) ಹಿಂದಿನ ವರ್ಷದಿಂದ ಉಳಿದು ಬಂದ ಸಕ್ಕರೆ ದಾಸ್ತಾನು ದಿನಾಂಕ: 30-10-2002ರಲ್ಲಿದ್ದಂತೆ ಸುಮಾರು 4.32 ಲಕ್ಷ ಮೆ. ಟನ್ ಆಗಿದ್ದು 2002-03ನೇ ಸಾಲಿನ ಸಕ್ಕರೆ ಉತ್ಪಾದನೆ 18.00 ಲಕ್ಷ ಮೆಟ್ರಿಕ್ ಟನ್ ಸೇರಿ ಒಟ್ಟು 22.36 ಲಕ್ಷ ಮೆಟ್ರಿಕ್ ಟನ್ ಸಕ್ಕರೆಯಲ್ಲಿ ಸುಮಾರು 9.76 ಲಕ್ಷ ಮೆಟ್ರಿಕ್ ಟನ್ ಮಾರಾಟವಾಗಿ ಆಖೈರು ದಾಸ್ತಾನು ದಿನಾಂ: 30-6-03ರಲ್ಲಿದ್ದಂತೆ 12.60 ಲಕ್ಷ ಮೆಟ್ರಿಕ್ ಟನ್ ಇದೆ.

ಇ) 2002–03ನೇ ಹಂಗಾಮಿಗೆ ಎಲ್ಲಾ ಸಕ್ಕರೆ ಕಾರ್ಖಾನೆಗಳೂ ಸೇರಿ ದಿನಾಂಕ: 30–6–2003ರ ಅಂತ್ಯಕ್ಕೆ ರೂ. 1155.00 ಕೋಟಿ ಪಾವತಿಸಬೇಕಾಗಿದ್ದು ಇದರಲ್ಲಿ ರೂ.880.00 ಕೋಟಿ ಪಾವತಿಸಿದ್ದು, ಉಳಿದ ಮೊತ್ತ ರೂ. 275.00 ಕೋಟಿ ಬಾಕಿ ಇರುತ್ತದೆ. ಹಿಂದಿನ ಬಾಕಿ ರೂ. 47.00 ಕೋಟಿ ಸೇರಿ ಒಟ್ಟು ಪಾವತಿಸಬೇಕಾದ ಬಾಕಿ ಮೊತ್ತ ದಿನಾಂಕ : 30–6–2003ಕ್ಕೆ ರೂ. 322.00 ಕೋಟಿ ಇರುತ್ತದೆ. ಕೇಂದ್ರ ಸರ್ಕಾರವು ಕನಿಷ್ಟ ಬೆಂಬಲ ಬೆಲೆಯನ್ನು ನಿಗಧಿಗೊಳಿಸುತ್ತಿದ್ದು, ಟನ್ 1ಕ್ಕೆ ಶೇ 8.5ರ ಮೇಲೆ ಇಳುವರಿ ಬಂದರೆ ಕಾರ್ಖಾನೆಗಳು ಟನ್‌ಗೆ ರೂ. 695.00 ರಂತೆ ಶಾಸನಬದ್ಧ ಕನಿಷ್ಟ ಬೆಂಬಲ ಬೆಲೆಯನ್ನು ನೀಡುತ್ತದೆ.

ಈ) ರಾಜ್ಯದಲ್ಲಿ ರೋಗಗ್ರಸ್ಥ ಸಕ್ಕರೆ ಕಾರ್ಖಾನೆಗಳನ್ನು ಪುನಃಶ್ಚೇತನಗೊಳಿಸಲು ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಲಾಗಿದೆ. ಸದರಿ ಸಮಿತಿಯು ಈಗಾಗಲೇ ಹಲವಾರು ಬಾರಿ ಸಭೆ ಸೇರಿ ರೋಗಗ್ರಸ್ಥತೆ ಬಗೆಗಿನ ಕಾರಣ, ಪುನಃಶ್ಚೇತನಕ್ಕೆ ಯಾವ ಯಾವ ಕ್ರಮ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಚರ್ಚಿಸಿದೆ. ಆ ಪ್ರಕಾರ ಕೆಲವೊಂದು ಕಾರ್ಖಾನೆಗಳನ್ನು ಗುರುತಿಸಿ ಯಾವ ರೀತಿ ಸಹಾಯ ಮಾಡಬಹುದೆಂಬ ಬಗ್ಗೆ ಯೋಜಿಸಲಾಗುತ್ತಿದೆ. ಸಮಿತಿಯು ತನ್ನ ವರದಿಯನ್ನು ಸದ್ಯದಲ್ಲೇ ನೀಡಲಿದೆ.

ರಾಜ್ಯ ಅಂತರ್ಜಲ ಅಭಿವೃದ್ಧಿಗೆ ಕೈಗೊಂಡ ಕ್ರಮಗಳು

3630(4352) ಶ್ರೀ ಬಿ.ಎನ್. ಬಚ್ಚೇಗೌಡ (ಹೊಸ ಕೋಟೆ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಂತರ್ಜಲ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ;ಇದರಲ್ಲಿ ಸರ್ಕಾರ ತೊಡಗಿಸಿರುವ ಹಣವೆಷ್ಟು;

ಆ) ಪ್ರತೀ ವರ್ಷ ಅಂತರ್ಜಲ ಎಷ್ಟು ಅಡಿ ಕೆಳಗೆ ಹೋಗುತ್ತಿದೆ; ಇದಕ್ಕೆ ಏನಾದರೂ ಪರಿಹಾರ ಕಾರ್ಯಗಳನ್ನು ಕೈಗೊಂಡಿದೆಯೇ;

ಇ) ಕೊಳವೆ ಬಾವಿಗಳು ಮತ್ತು ಇನ್ನಿತರ ಮೂಲಗಳಿಂದ ನೀರಿನ ದುರ್ಬಳಕೆ ಮೇಲೆ ನಿಯಂತ್ರಣ ಹಾಕಲು ಸರ್ಕಾರದ ಮುಂದೆ ಏನಾದರೂ ಪ್ರಸ್ತಾವನೆ ಇದೆಯೇ;

ಈ) ಹಾಗಿದ್ದರೆ, ನಿಯಂತ್ರಿಸಲು ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು) :

ಅ) ರಾಜ್ಯದಾದ್ಯಂತ ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಇಲಾಖೆಯು ಕ್ಲಿಷ್ಟಕರವಾದ ಪ್ರದೇಶಗಳಲ್ಲಿ ವಿವಿಧ ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳನ್ನು ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಇದುವರೆಗೆ ಒಟ್ಟು 1091 ಸಂಖ್ಯೆಯ ರಚನೆಗಳನ್ನು ನಿರ್ಮಾಣ ಮಾಡಲಾಗಿದೆ. ಇದಕ್ಕಾಗಿ ಈವರೆಗೆ ಒಟ್ಟು ರೂ. 667.23 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಆ) ರಾಜ್ಯದಲ್ಲಿನ ಅಂತರ್ಜಲ ಏರುಪೇರುಗಳನ್ನು ಅಧ್ಯಯನ ಮಾಡಲು 1895 ಅಧ್ಯಯನ ಬಾವಿಗಳ ಜಾಲದಿಂದ ಪ್ರತಿ ತಿಂಗಳು ಜಲಮಟ್ಟ ಮಾಪನ ಮಾಡುತ್ತಿದ್ದು, ಅಂತರ್ಜಲ ಇಳಿಮುಖವಾಗುತ್ತಿರುವುದು ಕಂಡುಬಂದಿದೆ. 1997, 2000 ಮತ್ತು 2003ರ ಮಾಪನದ ವಿಶ್ಲೇಷಣೆ ಮೇರೆಗೆ ರಾಜ್ಯದಲ್ಲಿನ ಜಿಲ್ಲಾವಾರು ಸರಾಸರಿ ಅಂತರ್ಜಲ ಮಟ್ಟ ವಿವರಗಳನ್ನು ಅನುಬಂಧ–1 ರಲ್ಲಿ ನೀಡಿದೆ.